# 3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

## Spl. C. No. 23/2014 ಪಿಡಬ್ಲ್ಯೂ 2

ದಿನಾಂಕಃ 03.02.2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ವಕೀಲರಿಂದ.**

ನಾನು ವೈದ್ಯರ ಮುಂದೆ 75 ವರ್ಷ ವಯಸ್ಸು ಎಂದು ಹೇಳಿದ್ದೇನೆ ಎಂದರೆ ಸರಿ. ಪೊಲೀಸರ ಮುಂದೆ ಹೇಳಿಕೆ ನೀಡುವಾಗ ನನ್ನ ವಯಸ್ಸನ್ನು 75 ವರ್ಷ ವಯಸ್ಸು ಎಂದು ಹೇಳಿದ್ದೇನೆ ಎಂದರೆ ಸರಿ. ಹೊನ್ನೇನಹಳ್ಳಿಯಲ್ಲಿ ನನಗೆ ಸ್ವಲ್ಪ ಆಸ್ತಿ ಇದೆ ಎಂದರೆ ಸರಿ. ಆ ಆಸ್ತಿಯಲ್ಲಿ ಅಡಿಕೆ , ತೆಂಗು ಬೆಳೆ ಇದೆ ಎಂದರೆ ಸರಿ. ಗಂಗಾ ಕಲ್ಯಾಣ ಯೋಜನೆಯ ಅಡಿಯಲ್ಲಿ ಸರ್ಕಾರದಿಂದ ಕೊಳವೆ ಬಾವಿ ತೆಗೆಸಿಕೊಂಡಿದ್ದೇವೆ ಎಂದರೆ ಸರಿ. ನಮಗೆ ಸೇರಿದ 400 ಅಡಿಕೆ ಮತ್ತು 100 ತೆಂಗಿನ ಮರಗಳು ಇವೆ ಎಂದರೆ ಸರಿ. ಒಂದು ವರ್ಷಕ್ಕೆ 20 ಸಾವಿರಕ್ಕೂ ಅಧಿಕ ತೆಂಗಿನ ಕಾಯಿಗಳು ತೋಟದಿಂದ ದೊರೆಯುತ್ತವೆ ಎಂದರೆ ಸರಿ. 7- 8 ಕ್ವಿಂಟಾಲ್ ಅಡಿಕೆ ಬರುತ್ತದೆ. 9 ಲಕ್ಷ ಆದಾಯ ವಾರ್ಷಿಕವಾಗಿ ಬರುತ್ತದೆ ಎಂದರೆ ಸರಿ. ಸರ್ಕಾರದಿಂದ ಬಿ ಪಿ ಎಲ್ ಕಾರ್ಡ್ ಪಡೆದಿದ್ದೇವೆ ಎಂದರೆ ಸರಿ. ಸರ್ಕಾರದಿಂದ ರೇಷನ್ ಪಡೆದುಕೊಳ್ಳುತ್ತೇವೆ ಎಂದರೆ ಸರಿ. ನನ್ನ ಮೊಮ್ಮಕ್ಕಳು ಸರ್ಕಾರಿ ಕೆಲಸದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನನ್ನ ಮಗ ಜೆ ಸಿ ಬಿ ಆಪರೇಟರ್ ಆಗಿ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ನಾನು ವಯಸ್ಸಾಗಿರುವ ಕಾರಣ, ಮತ್ತು ಕಣ್ಣು ಕಾಣದ ಕಾರಣ ಕೂಲಿ ಕೆಲಸಕ್ಕೆ ಹೋಗದೇ ಮನೆಯಲ್ಲಿ ಇದ್ದೇನೆ ಎಂದರೆ ಸರಿಯಲ್ಲ.

ನಾನು ಚೇಳೂರು ಠಾಣೆಯಲ್ಲಿ ದೌರ್ಜನ್ಯ ತಡೆ ಕಾಯಿದೆ ಅಡಿ ಯಾವುದೇ ಪ್ರಕರಣ ದಾಖಲಿಸಿಲ್ಲ. ಪ್ರಭುಸ್ವಾಮಿ ಮತ್ತು ಕುಮಾರ ಸ್ವಾಮಿ ಎನ್ನುವವರ ಮೇಲೆ ಎರಡು ಪ್ರತ್ಯೇಕ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಊರಿನ ಪಕ್ಕದ ಚಂದ್ರಣ್ಣ ಚಾಸಾ.6 ರವರ ಕೆಲಸಕ್ಕೆ ಕಳುಹಿಸಿದ್ದರು. ಹಾಗಾಗಿ ಚಾಸಾ.6 ರವರು ಪರಿಚಯ ಇದ್ದಾರೆ. ಚಾಸಾ.6 ರವರ ಜೊತೆ ಗುತ್ತಿಗೆಗೆ ಸಂಬಂಧಿಸಿದಂತೆ ಯಾವುದೇ ಕಾರಾರು ಮಾಡಿಕೊಂಡಿಲ್ಲ. ಚಾಸಾ.6 ರವರ ಜಮೀನಿನಲ್ಲಿ ತೆಂಗಿನ ಮರಗಳು ಮತ್ತು ಸೀಬೆ ಮರಗಳು ಇವೆ. ಸರ್ವೆ ನಂಬರ್ 158 ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸುರಪುರವರು ಕೆಲಸಕ್ಕೆ ಕರೆದಿದ್ದರು ಹೋಗಿದ್ದೆ ಎಂದು ನುಡಿಯುತ್ತಾರೆ. ಮಹದೇವಯ್ಯರವರು ತೋಟದಲ್ಲಿ ಮೇಲೆ ಇದ್ದಾರೆ. ಅವರ ಮನೆಯ ಮುಂದೆ ತೊಟ್ಟಿ ಮತ್ತು ಬೋರು ಇದೆ ಎಂದರೆ ನಾನು ನೋಡಿಲ್ಲ. ಮಹದೇವರಯ್ಯರವರು ಹಾಕಿಕೊಂಡಿದ್ದ ಸೋಗೇ ಗುಡಿಸಲು ಸುಟ್ಟು ಹೋಗಿದೆ  ಎಂದರೆ ಸರಿ. ಜಮೀನಿನ ಬೊರು ಮಹದೇವಯ್ಯರವರ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಮಹದೇವಯ್ಯರವರ ತೋಟದಲ್ಲಿ ವಿದ್ಯುತ್ ಸಂಪರ್ಕ ತೆಗೆದುಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಕೂಲಿ ಮಾಡಿ ಪ್ರತಿದಿನ ಮನೆಗೆ ಹೋಗುತ್ತೇನೆ. ಸರ್ವೆ ನಂ 158 ರ ಮೇಲೆ ಕೇಸು ನಡೆಯುತ್ತಿದೆ ಎಂದರೆ ನನಗೆ ಗೊತ್ತು. ಚಾಸಾ.6 ರವರು 1 ನೇ ಆರೋಪಿಯ ಮನೆ ಕಿತ್ತು ಹಾಕಿರುವ ಬಗ್ಗೆ ನಡೆಯುತ್ತಿರುವ ಕೇಸಿನ ಬಗ್ಗೆ ನನಗೆ ಗೊತ್ತು ಎಂದರೆ ಸರಿಯಲ್ಲ. ಸಾಕ್ಷಿಗೆ ಸ್ವತ್ತು ಮಹದೇವಯ್ಯನ ಸ್ವಾಧೀನದಲ್ಲಿ ಇದೆ ಎಂದು ಪ್ರಶ್ನಿಸಲಾಗಿ ಸಾಕ್ಷಿ ,ನನಗೆ ಗೊತ್ತಿಲ್ಲ ಯಾರ ಸ್ವಾಧಿನದಲ್ಲಿ ಇದೆ ಎಂದು ತಿಳಿಸುತ್ತಾರೆ.

ಮಹದೇವಯ್ಯ ಮತ್ತು ಇತರೇ ಆರೋಪಿಗಳು ಆಗಲಿ ಜಮೀನಿಗೆ ಬಂದಿಲ್ಲ ಮತ್ತು ನನಗೆ ಬೈದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ನನ್ನ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು 2- 3 ಬಾರಿ ನನ್ನ ಬಳಿ ನನ್ನ ಹೆಬ್ಬೆಟ್ಟಿನ ಗುರುತನ್ನು ತೆಗೆದುಕೊಂಡಿದ್ದಾರೆ. ಆಸ್ಪತ್ರೆಯಲ್ಲಿ ಮತ್ತು ಮನೆಯ ಹತ್ತಿರ ಪಡೆದುಕೊಂಡಿದ್ದಾರೆ. ಮೂ ಮಾ .1 ನಮ್ಮ ತೋಟದ ತೆಂಗಿನ ಕಾಯಿ ಎಂದರೆ ಸರಿಯಲ್ಲ. ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ಮೂ ಮಾ .2 ರ ರೀತಿಯ ವಸ್ತುಗಳು ಎಲ್ಲಾ ರೈತರ ಮನೆಗಳಲ್ಲಿ ಸಿಗುತ್ತವೆ ಎಂದರೆ ಸರಿ. ಬಿಸಿಕಾವಲಿನಿಂದ ಸಂಪಿಗೆಯ ಸರ್ಕಾರಿ ಆಸ್ಪತ್ರೆಗೆ 2 ಕಿಮಿ ದೂರ ಎಂದರೆ ಸರಿ. ಬಿಸಿಕಾವಲಿನಿಂದ ದಂಡಿನ ಶಿವರದ ಸರ್ಕಾರಿ ಆಸ್ಪತ್ರೆಗೆ 6 ಕಿಮಿ ದೂರ ಎಂದರೆ ಸರಿ. ಸಿಂಪಿಗೆ ಇಂದ ದಂಡಿನಶಿವರಕ್ಕೆ ಬಸ್ಸುಗಳು ಓಡಾಡುತ್ತವೆ ಎಂದರೆ ಸರಿ. ದಂಡಿನಶಿವರ ಆಸ್ಪತ್ರೆಯಿಂದ ಪೊಲೀಸ್ ಠಾಣೆಗೆ 100 ಮಿಟರ್ ದೂರವಾಗುತ್ತದೆ ಎಂದರೆ ಸರಿ.ಯಾವುದೇ ಗಾಯಗಳು ಆಗಿಲ್ಲ ಎಂದರೆ ಸರಿಯಲ್ಲ. ದುರುದ್ದೇಶದಿಂದ ತುಮಕೂರು ಆಸ್ಪತ್ರೆಗೆ ನಾನು ಚಿಕಿತ್ಸೆ ಪಡೆಯಲು ಬಂದಿದ್ದೇನೆ ಎಂದರೆ ಸರಿಯಲ್ಲ. ನನಗೆ ಉಬ್ಬಸದ ಕಾಯಿಲೆ ಇಂದಿಗೂ ಇದೆ ಎಂದರೆ ಸರಿಯಲ್ಲ. ಉಬ್ಬಸ ಕಾಯಿಲೆ ಜಾಸ್ತಿ ಆಗಿ, ನಾನು ಬಿದ್ದು, ಚಿಕಿತ್ಸೆಗೆ ಸೇರಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಮದ್ಯಪಾನ ಮಾಡುವ ಅಭ್ಯಾಸ ಇದೆ ಎಂದರೆ ಸರಿ. ಅತಿಯಾದ ಮದ್ಯಪಾನ ಮಾಡಿ ಬಿದ್ದು , ಗಾಯಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಮಾಡಿಕೊಂಡಿದ್ದಾರೆ.

ಹೇಳಿಕೆಯಲ್ಲಿ 6 ಜನರು ಇದ್ದರು ಎಂದು ಹೇಳಿದ್ದೇನೆ ಎಂದರೆ ಸರಿ. ಚಾಸಾ.6 ರವರ ಮಾತು ಕೇಳಿ ಗಲಾಟೆ ಆಗದೇ ಇದ್ದರೂ ಸುಳ್ಳು ದೂರು ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಮ್ಮ ಜಮೀನಿಗೆ ಪ್ರತಿನಿತ್ಯ 4- 5 ಕೂಲಿ ಆಳುಗಳು ಬರುತ್ತಾರೆ ಎಂದು ಪ್ರಶ್ನಿಸಲಾಗಿ, ಸಾಕ್ಷಿ ನಾನು ಮಾಡಿಸುತ್ತೇನೆ ಮತ್ತು ಕೂಲಿ ಮಾಡುತ್ತೇನೆ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ

3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.